ಅಸಲು ದಾವಾ ಸಂಖ್ಯೆಃ 644/2008

ಪಿ.ಡಬ್ಲ್ಯು.2

ದಿನಾಂಕಃ 29.03.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀಸವಾಲುಃ 2ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಕೆ.ಎಂ.ವಿ ರವರಿಂದ

1ನೇ ವಾದಿಯ ತಾತಾನ ತಂದೆಯ ಹೆಸರು ನಂಜಪ್ಪ ಎಂದರೆ ಸರಿ. ಸದರಿ ನಂಜಪ್ಪ ರವರಿಗೆ ಮುನಿಯಪ್ಪ ಮತ್ತು ದ್ಯಾವಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಮುನಿಯಪ್ಪ ರವರಿಗೆ ದೊಡ್ಡ ವೆಂಕಟರಾಯಪ್ಪಕ, ಚಿಕ್ಕವೆಂಕಟರಾಯಪ್ಪ, ದೊಡ್ಡ ಚನ್ನಪ್ಪ ಮೂರು ಜನ ಮಕ್ಕಳು ಎಂದರೆ ಸರಿ. ದ್ಯಾವಪ್ಪ ರವರಿಗೆ ನಂಜಪ್ಪ ಮತ್ತು ರಾಮಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಮುನಿಯಪ್ಪ ರವರ ಮಗ ದೊಡ್ಡವೆಂಕಟರಾಯಪ್ಪ ರವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ದೊಡ್ಡ ವೆಂಕಟರಾಯಪ್ಪ ಮತ್ತು ಅವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಚಿಕ್ಕವೆಂಕಟರಾಯಪ್ಪ ರವರಿಗೆ ನಾರಾಯಣಪ್ಪ, ರಾಮಕೃಷ್ಣಪ್ಪ, ವಾದಿಗಳಾದ ಕೆಂಪಮ್ಮ ಮತ್ತು ವೆಂಕಟಮ್ಮ ನಾಲ್ಕು ಜನ ಮಕ್ಕಳು. ದೊಡ್ಡ ಚನ್ನಪ್ಪ ರವರಿಗೆ ಮಕ್ಕಳು ಇಲ್ಲ. ದೊಡ್ಡ ವೆಂಕಟರಾಯಪ್ಪ ಜಾಸ್ತಿ ವರ್ಷಗಳ ಹಿಂದೆ ಬೇರೆ ಕಡೆ ವಾಸವಾಗಿರುತ್ತಾರೆ.

ಚಿಕ್ಕವೆಂಕಟರಾಯಪ್ಪ ಮತ್ತು ದೊಡ್ಡಚನ್ನಪ್ಪ ಜೊತೆಯಾಗಿ ವಾಸವಾಗಿದ್ದಾರೆ. 1 ಮತ್ತು 2ನೇ ಪ್ರತಿವಾದಿಗಳು ನನಗೆ ಬುದ್ದಿ ಬಂದ ಕಾಲದಿಂದಲೂ ಹೆಂಗಸರಲ್ಲಿ ಅನ್ಯೋನ್ಯತೆ ಇಲ್ಲದ್ದರಿಂದ ಬೇರೆಯಾಗಿ ವಾಸವಾಗಿದ್ದಾರೆ. 1 ಮತ್ತು 2ನೇ ಪ್ರತಿವಾದಿ ಊಟ ತಿಂಡಿ ಮಾತ್ರ ಬೇರೆ ಮಾಡುತ್ತಿದ್ದು, ವ್ಯವಹಾರ ಎಲ್ಲಾ ಒಟ್ಟಿಗೆ ಮಾಡುತ್ತಿದ್ದರು. 1ನೇ ಪ್ರತಿವಾದಿ ಯಾವುದೇ ಜಮೀನು ಮಾರಾಟ ಮಾಡಿಲ್ಲ. ಈ ಕೇಸನ್ನು ನಾರಾಯಣಪ್ಪ ಮತ್ತು ರಾಮಕೃಷ್ಣಪ್ಪ ಹಾಗೂ ಇತರರ ಮೇಲೆ ಹಾಕಿರುತ್ತಾರೆ, ಉಳಿದವರ ಹೆಸರು ನೆನಪಿರುವುದಿಲ್ಲ. ಒಟ್ಟು 15-16 ಆಸ್ತಿಗಳ ಮೇಲೆ ಈ ಕೇಸು ಹಾಕಿರುತ್ತಾರೆ. ದಾವಾ ಸ್ವತ್ತುಗಳ ದಾಖಲೆ ಒಂದೊಂದು ನೋಡಿದ್ದೇನೆ, ನೆನಪಿಲ್ಲ. 1 ಮತ್ತು 2ನೇ ಪ್ರತಿವಾದಿಗಳ ಹೆಸರಿನಲ್ಲಿ ದಾವಾ

ಸ್ವತ್ತುಗಳು ಪ್ರತ್ಯೇಕ ವಿಸ್ತೀರ್ಣಗಳಲ್ಲಿ ದಾಖಲೆ ಬರುತ್ತಿದೆ. 1 ಮತ್ತು 2ನೇ ಪ್ರತಿವಾದಿಯ ಹೆಸರಿಗೆ ಯಾವಾಗ ಬದಲಾವಣೆ ಆಯಿತು ಎಂದು ತಿಳಿದುಕೊಂಡಿಲ್ಲ, ಈ ಕೇಸು ಹಾಕಿದಾಗ ಗೊತ್ತಾಗಿರುತ್ತದೆ.

1 ಮತ್ತು 2ನೇ ಪ್ರತಿವಾದಿ ಹೆಸರಿಗೆ ಯಾವ ಆಧಾರದ ಮೇಲೆ ಬಂತು ಎಂದು ತಿಳಿದುಕೊಂಡಿಲ್ಲ. ದಿನಾಂಕ 12.12.1983 ರಲ್ಲಿ ದೊಡ್ಡವೆಂಕಟರಾಯಪ್ಪ, ದೊಡ್ಡಚನ್ನಪ್ಪ, ನಂಜಪ್ಪ, ನಾರಾಯಣಪ್ಪ, ರಾಮಕೃಷ್ಣಪ್ಪ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ಎ ಷೆಡ್ಯೂಲ್ ಸ್ವತ್ತು ನಂಜಪ್ಪ ರವರಿಗೆ, ಬಿ ಷೆಡ್ಯೂಲ್ ಸ್ವತ್ತು ದೊಡ್ಡವೆಂಕಟರಾಯಪ್ಪ ರವರಿಗೆ ಸಿ ಷೆಡ್ಯೂಲ್ ಸ್ವತ್ತು ದೊಡ್ಡ ಚನ್ನಪ್ಪ ರವರಿಗೆ ಡಿ ಷೆಡ್ಯೂಲ್ ಸ್ವತ್ತುಗಳು ನಾರಾಯಣಪ್ಪ ರವರಿಗೆ, ಇ ಷೆಡ್ಯೂಲ್ ಸ್ವತ್ತುಗಳು ರಾಮಕೃಷ್ಣಪ್ಪ ರವರಿಗೆ ಬಂತು ಎಂದರೆ ನನಗೆ ಗೊತ್ತಿಲ್ಲ. ಸದರಿ ಷೆಡ್ಯೂಲ್‌ಗಳಂತೆ ಅವರವರ ಭಾಗಕ್ಕೆ ಬಂದ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ, ಒಟ್ಟು ಕುಟುಂಬದಲ್ಲೇ ಇರುತ್ತಾರೆ.

<u>2ನೇ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀಸವಾಲಿಗಾಗಿ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

Sd/-
(ಶ್ರೀಮತಿ. ರೋಹಿಣಿ. ಡಿ)
ಅಪರ ಸಿ.ಜೆ. ಮತ್ತು
ಜೆಎಂಎಫ್‌ಸಿ, ಶಿಡ್ಲಘಟ್ಟ.